# ಪ್ರಾರ್ಥನೆ

ಡಾ. ಸಿ.ಪಿ. ಕೃಷ್ಣಕುಮಾರ್

ಪ್ರಸಿದ್ಧ ಸಾಹಿತಿಗಳಾದ ಲೇಖಕರು ಪ್ರಾರ್ಥನೆಯ ಕುರಿತು ತಮ್ಮ ಚಿಂತನೆಗಳನ್ನು ತಿಳಿಸಿದ್ದಾರೆ. ಅತಿ ಸಾಮಾನ್ಯವಾದ ವಿಷಯಕ್ಕೆ ಪ್ರಾರ್ಥನೆಯನ್ನು ಬಳಸುವುದು ಸಲ್ಲದೆಂದು ತಿಳಿಸಿರುವ ಲೇಖಕರು ಮೈಸೂರಿನ ನಿವಾಸಿಗಳು.

"ಈ ಜಗತ್ತು ಕಲ್ಪಿಸಿಕೊಳ್ಳುವುದಕ್ಕಿಂತ ಹೆಚ್ಚು ಸಂಗತಿಗಳು ಪ್ರಾರ್ಥನೆಯಿಂದ ಸಾಧಿತವಾಗುತ್ತವೆ" (More things are wrought by prayer than this world dreams of) ಎಂಬುದು ಟೆನಿಸನ್ ಕವಿಯ ಪ್ರಸಿದ್ಧವಾದ ಉಕ್ತಿ. ಪ್ರಾರ್ಥನಾ ಶಕ್ತಿಯ ಒಂದು ಪರಿಮಿತ ಕಲ್ಪನೆ ನಮಗಿರಕೂಡದು ಎಂಬುದು ಈ ಮಾತಿನ ಅಭಿಪ್ರಾಯ. ಆದರೆ ಅಷ್ಟಾದರೂ ಇದೆಯೆಂಬುದು ಸಂದೇಹಾಸ್ಪದ. ಆಧುನಿಕ ಪ್ರಪಂಚಕ್ಕೆ ಪ್ರಾರ್ಥನೆಯಲ್ಲಿ ನಂಬಿಕೆಯಿಲ್ಲವೆಂಬುದು ಸ್ಪಷ್ಟ. ವಾಸ್ತವವಾಗಿ ಪ್ರಾರ್ಥನೆಯೊಂದು ಅಮೋಘ ಶಕ್ತಿ; ಅದಕ್ಕೆ ಯಾವುದೂ ಅಸಾಧ್ಯವಲ್ಲ; ಅದೇ ನಿಜವಾದ ಕಾಮಧೇನು ಮತ್ತು ಕಲ್ಪವೃಕ್ಷ!

ಪ್ರಾರ್ಥನೆ ಎಂದರೇನು? ಗಾಂಧೀಜಿ ಅದನ್ನು ಹೀಗೆ ಲಕ್ಷಣೀಕರಿಸುತ್ತಾರೆ: "ಪ್ರಾರ್ಥನೆಯೆಂದರೆ ಗೌರವಪೂರ್ವಕವಾಗಿ ದೇವರಿಂದ ಏನನ್ನಾದರೂ ಬೇಡುವುದು." ಆಧುನಿಕ ಮಾನವನ ದುರ್ದೈವವೇನೆಂದರೆ, ಅವನು ಭಗವಂತನನ್ನು ಪ್ರಾರ್ಥಿಸುವುದಿಲ್ಲ; ದೈನ್ಯದಿಂದ ಮಾನವರನ್ನು ಬೇಡುತ್ತಾನೆ ಅಥವಾ ಹಕ್ಕುಗಳ ನೆಪದಲ್ಲಿ demands ಮಂಡಿಸುತ್ತಾನೆ. ಯಾಚನೆ, ಹಕ್ಕೊತ್ತಾಯ ಎರಡೂ ಪ್ರಾರ್ಥನೆಯಾಗುವುದಿಲ್ಲ. ಅಲ್ಲದೆ, ಜನ ಏನು ತಾನೆ ಕೊಡಬಲ್ಲರು? ಜನಾರ್ದನ ಕೊಡಬೇಕು; ಮನಸ್ಸು ತಣಿಯಬೇಕು. ಜನಪದ ಹಾಡಿಲ್ಲವೆ?– "ಮಂದ್ಯೇನು ಕೊಟ್ಟೀತ, ಮನವೇನು ದಣಿದೀತ, ಮುಂಜಾನ ದಾನ ಗಿರಿಮಲ್ಲ ಕೊಟ್ಟರೆ, ಮನೆ ತುಂಬಿ ನಮ್ಮ ಮನ ತುಂಬಿ!"

ಪ್ರಾರ್ಥನೆಗೆ ಮೂಲ ಬುದ್ಧಿಯಲ್ಲ, ಶ್ರದ್ಧೆ; ಬಹು ಕಾಲ ಬೇಸರವಿಲ್ಲದೆ ಕಾಯಬಲ್ಲ ಶ್ರದ್ಧೆ. ಅಂತಃಕರಣಪೂರ್ವಕವಾದ, ಶ್ರದ್ಧಾನ್ವಿತವೂ ಶುದ್ಧವೂ ಆದ ಪ್ರಾರ್ಥನೆ ವಿಫಲವಾಗುವುದಿಲ್ಲ. ಯೇಸುಕ್ರಿಸ್ತನ ಈ ಆಶ್ವಾಸನೆಯನ್ನು ನೆನೆಯಬಹುದು: "Ask and it shall be given you; seek and ye shall find; knock and it shall be opened unto you!" "ಕೇಳಿ, ನಿಮಗದು ಕೊಡಲ್ಪಡುತ್ತದೆ. ಅರಸಿದರೆ ನೀವು ಅದನ್ನು ಹೊಂದುವಿರಿ. ಬಾಗಿಲು ತಟ್ಟಿ, ತೆರೆದುಕೊಳ್ಳುತ್ತದೆ." ಹೌದು. ಆದರೆ ನಾವು ದೇವಾಲಯದ ಬಾಗಿಲು ತಟ್ಟುವುದಿಲ್ಲ; ಯಾರಯಾರದೋ ಬಾಗಿಲು ತಟ್ಟುತ್ತೇವೆ; ತೆರೆದುಕೊಳ್ಳಬಹುದು, ದುರಂತದ ಹೆಬ್ಬಾಗಿಲು!

ಈಗ ಪ್ರಶ್ನೆಯೊಂದು ಉದ್ಭವಿಸುತ್ತದೆ: ಪ್ರಾರ್ಥನೆಯಿಂದ ಏನು ಬೇಕಾದರೂ ಸಿಕ್ಕುತ್ತದೆ ಎನ್ನುವುದಾದರೆ, ನೀಚವೂ ಕ್ಷುದ್ರವೂ ಆದುದನ್ನು ಕೇಳಿಕೊಂಡಾಗ ಅದೂ ಸಿಕ್ಕುತ್ತದೆಯೆ? ಸಿಕ್ಕಬಹುದು. ಆದರೆ ಅದು ಅನರ್ಥಕರವಾಗುತ್ತದೆ; ಶ್ರೇಯಸ್ಕರವಾಗುವುದಿಲ್ಲ. ಆಸ್ಕರ್ ವೈಲ್ಡ್ ಒಂದೆಡೆ ಹೇಳುತ್ತಾನೆ: "ದೇವತೆಗಳು ನಮ್ಮನ್ನು ಶಿಕ್ಷಿಸಬಯಸಿದಾಗ, ನಮ್ಮ ಪ್ರಾರ್ಥನೆಗಳಿಗೆ ಉತ್ತರಿಸುತ್ತಾರೆ!" ಇಲ್ಲಿ ನೆನಪಿಡಬೇಕಾದ ಮುಖ್ಯಾಂಶವೇನೆಂದರೆ, ಪ್ರಾರ್ಥನೆ ಮತ್ತು ಕೆಟ್ಟದ್ದು ಜೊತೆಯಾಗಿ ಸಾಗುವುದು ಸಾಧ್ಯವಿಲ್ಲ. ದೇವರ ಮುಂದೆ ನಿಂತು, ಕೆಟ್ಟದ್ದನ್ನು ಕರುಣಿಸು ಎಂದು ಬೇಡುವುದು ಸಾಧ್ಯವೆ? ಶಿವನ ಮುಂದೆ ಅಶಿವದ ಭಿಕ್ಷೆಯೆ?

ಅತ್ಯುನ್ನತವಾದುದನ್ನು ಪ್ರಾರ್ಥಿಸಿ ಪಡೆಯುವ ಸಾಧ್ಯತೆಯಿರುವಾಗ, ಅನೇಕರು ಅಲ್ಪವನ್ನು ಪಡೆದು ಸಂತೃಪ್ತರಾಗುತ್ತಾರೆ. ಕುಮಾರವ್ಯಾಸ ಭಾರತದಲ್ಲಿ ಬರುವ ಅರ್ಜುನನ ಒಂದು ನುಡಿ ನೆನಪಾಗುತ್ತದೆ. ಅವನು ತಪಸ್ಸು ಮಾಡಿ ಶಿವನನ್ನು ಮೆಚ್ಚಿಸಿ, ಪಾಶುಪತಾಸ್ತ್ರ ಸಂಪಾದಿಸುತ್ತಾನಷ್ಟೆ. ಶಿವ ಅತ್ತ ಹೋದಮೇಲೆ ಪಶ್ಚಾತ್ತಾಪ ಪಡುತ್ತಾನೆ. ಅರ್ಜುನ: "ಹರನ ನೀ ಚರ್ಮಾಕ್ಷಿಯಲಿ ಗೋಚರಿಸೆ ಬೇಡಿದುದಂಬು ಮರ್ತ್ಯದೊಳಿರವು ಮಝು ಭಾಪು!" ಪರಮಪುರುಷಾರ್ಥವಾದ ಮೋಕ್ಷವನ್ನೆ ಬೇಡಬಹುದಿತ್ತಲ್ಲ, ಬೇಡಲಿಲ್ಲವಲ್ಲ ಎಂದು ಅವನ ವಿಷಾದ. ಅರ್ಜುನ ಎಷ್ಟೋ ಮೇಲು, ಜಯದ್ರಥನಿಗೆ ಹೋಲಿಸಿದಾಗ. ಭೀಮನಿಂದ ಪರಾಭವಗೊಂಡ ಜಯದ್ರಥ ಉಗ್ರ ತಪಸ್ಸಿನಿಂದ ಶಿವನನ್ನು ಒಲಿಸುತ್ತಾನೆ. ಶಿವ ಪ್ರತ್ಯಕ್ಷನಾಗಿ, ವರವನ್ನು ಕೇಳೆಂದಾಗ, "ಪಾಂಡವರನ್ನು ಒಂದು ದಿನದ ಮಟ್ಟಿಗೆ ಗೆಲ್ಲುವ ವರವನ್ನು ಕೊಡು" ಎಂದು ಕೋರುತ್ತಾನೆ. ಈ ಕೋರಿಕೆ ಎಷ್ಟು ಲಘುವಾದುದೆಂದರೆ, "ಭಾರಿಯ ವರವ ಹೆಸರಿಸಿದನು ಜಯದ್ರಥ!" ಎಂದು ಶಿವನೆ ಪಾರ್ವತಿಯೊಡನೆ ನಗೆಯಾಡುವುದನ್ನು ನೋಡುತ್ತೇವೆ.

ಎಷ್ಟೋ ಸಲ, ನಾವು ಬೇಡಿದ್ದನ್ನೆಲ್ಲ ದೇವರು ಕೊಡ

ದಿರಲೂಬಹುದು. ಈ ನಿರಾಕರಣ ನಿಷ್ಕರುಣದ ಕುರುಹು ಎಂಬ ನಿರ್ಧಾರಕ್ಕೆ ನಾವು ತಟಕ್ಕನೆ ನೆಗೆಯಬೇಕಾಗಿಲ್ಲ. ಇನ್ನೂ ಉತ್ತಮವಾದುದನ್ನು ಪಡೆಯುವ ಅವಕಾಶ ಒದಗಿಸುವುದಕ್ಕಾಗಿ, ನಮ್ಮನ್ನು ಅನುಗ್ರಹಯೋಗ್ಯರನ್ನಾಗಿಸು ವುದಕ್ಕಾಗಿ. ಒಟ್ಟಾರೆ ನಮ್ಮ ಹಿತಕ್ಕಾಗಿಯೇ ದೇವರು ನಮ್ಮ ಬೇಡಿಕೆಗಳನ್ನು ತಳ್ಳಿಹಾಕಬಹುದು! ಪುರಸ್ಕಾರ ಹೇಗೊ ಹಾಗೆ ತಿರಸ್ಕಾರವೂ ಭಗವತ್ಕೃಪೆಯ ಒಂದು ಭಂಗಿಯಾಗಬಹು ದೆಂಬುದು ಪೂರ್ಣದೃಷ್ಟಿಗೆ ವೇದ್ಯ. ಅಂತೆಯೆ, ಪ್ರಾರ್ಥನೆ ಯಿಂದ ದಿಢೀರ್ ಪವಾಡಗಳನ್ನೂ ನಿರೀಕ್ಷಿಸಬಾರದು; ಅದು ದೀರ್ಘಸೂತ್ರಿಯಾಗಿ, ಆದರೆ ತಪ್ಪದೆ, ಕೆಲಸ ಮಾಡುತ್ತದೆ.

ಪ್ರಾರ್ಥನೆಯ ಪ್ರಯೋಜನ ನಮ್ಮ ಬಯಕೆಯನ್ನು ಈಡೇರಿಸುವುದರಲ್ಲಿರಬಹುದು; ಹಾಗೆಯೆ ಆ ಬಯಕೆಯೇ ಲಯ ಹೊಂದುವಂತೆ ಮಾಡುವುದರಲ್ಲೂ ಇರಬಹುದು. ಅಭಿಲಾಷೆಗಳ ಪೂರೈಕೆ, ನಿರಸನ ಎರಡೂ ಸುಖಕರವೇ; ನಿರಸನ ಅತ್ಯಂತ ಸುಖಾವಹ. ಎಂತಲೇ, ಸಕಾಮ ಪ್ರಾರ್ಥನೆ ಗಿಂತ ನಿಷ್ಕಾಮ ಪ್ರಾರ್ಥನೆ ಉದಾತ್ತವಾದುದು; ಲೌಕಿಕ ಲಾಭ ಕ್ಕಿಂತ ಅಲೌಕಿಕ ಲಾಭ ಅಪೇಕ್ಷಣೀಯವಾದುದು. ಅಲೌಕಿಕ ಲಾಭವೆಂದರೆ, ಮರಣೋತ್ತರ ಮೋಕ್ಷವೆ ಆಗಬೇಕಿಲ್ಲ; ದೈಹಿಕ-ಮಾನಸಿಕ ಆರೋಗ್ಯ, ಚಿತ್ತಶಾಂತಿ, ಆತ್ಮಸಂತೋಷ—ಇದಕ್ಕಿಂತ ಮಿಗಿಲಾದ ಮೋಕ್ಷ ಯಾವುದಿದ್ದೀತು?

ಪ್ರಾರ್ಥನೆಯೊಂದು ಪ್ರಚಂಡ ಶಕ್ತಿಯಾದ್ದರಿಂದ, ಅದರ ದುರುಪಯೋಗದ ವಿರುದ್ಧ ಸದಾ ಜಾಗರೂಕತೆ ಅಗತ್ಯ. ಇಲ್ಲಿ ಶ್ರೀರಾಮಕೃಷ್ಣ ಪರಮಹಂಸರ ಕತೆಯೊಂದು ನೆನಪಾಗುತ್ತದೆ. ಪಯಣಿಗನೊಬ್ಬ ನೀರಡಿಕೆ, ಹಸಿವು, ಬಳಲಿಕೆಗಳಿಂದ ಬೆಂಡಾಗಿ, ಒಂದು ಮರದ ನೆರಳಿಗೆ ಬಂದ. ಅದು ಕಲ್ಪವೃಕ್ಷ ಎಂಬುದು ಅವನಿಗೆ ಗೊತ್ತಿಲ್ಲ. "ಈಗ ಕುಡಿಯುವುದಕ್ಕಿಷ್ಟು ನೀರು ಸಿಕ್ಕಿದರೆ!" ಎಂದು ಆಲೋಚಿಸಿದ. ಕೂಡಲೆ ನೀರು ಬಂತು; ಕುಡಿದ. ಬಳಿಕ "ಒಳ್ಳೆಯ ಊಟ ಸಿಕ್ಕಿದರೆ!" ಎಂದು ಆಲೋಚಿಸಿದ. ಅದೂ ಬಂತು; ಉಂಡ. ಕಾಲೊತ್ತಲು ಅಪ್ಸರೆ ಯರನ್ನು ನೆನೆದು ಪಡೆದ. ಇಷ್ಟಾದ ಮೇಲೆ ಸುಮ್ಮನಿರಬೇಡವೆ? "ಈಗ ಒಂದು ಹುಲಿ ನನ್ನ ಮೇಲೆ ಬಿದ್ದರೆ?" ಎಂದು ಯೋಚಿಸಿದ. ಆ ಕ್ಷಣವೆ ಒಂದು ಹುಲಿ ಅವನ ಮೇಲೆರಗಿ ತಿಂದುಹಾಕಿತು. ಯಾರೂ ಇಂಥ ಗಾಂಪರಾಗಬಾರದು. ಅಂತೆಯೆ ಸಿಕ್ಕಿದ ಸ್ಪರ್ಶಮಣಿ ಯನ್ನು ಸಾಮಾನ್ಯ ಶಿಲೆಯೆಂದು ಬಿಸಾಡುವುದೂ ಬೆಪ್ಪುತನ. ಪ್ರಾರ್ಥನೆ ತೀವ್ರವಾದರೆ ತಪಸ್ಸಾಗು ತ್ತದೆ. ತಪಸ್ಸು ಎಲ್ಲರಿಗೂ ಸಾಧ್ಯವಿಲ್ಲ. ಸಾಂಪ್ರದಾಯಿಕ ಅರ್ಥ ದಲ್ಲಂತೂ ಅದನ್ನು ಆಚರಿಸಬಲ್ಲವರು ಎಲ್ಲೋ ಕೆಲವರು. ಉಳಿದವ ರಿಗೆ, ಸಾಮಾನ್ಯರಿಗೆ ಪ್ರಾರ್ಥನೆ ಸಾಕು.

"ಪ್ರಾರ್ಥನೆ ಎಂದರೆ ಪ್ರೀತಿಸುವುದು" ಎನ್ನುವ ಸ್ವಾಮಿ ವಿವೇಕಾನಂದರ ಅಭಯವಾಣಿಯಿದು: "ಕರುಣಾಳು ಬಾ ಬೆಳಕೆ ಎಂದು ಪ್ರಾರ್ಥಿಸೋಣ. ಕತ್ತಲಲ್ಲಿ ಕಿರಣವೊಂದು ಬರುತ್ತದೆ; ಮಾರ್ಗದರ್ಶನ ಮಾಡಿಸಲು ಹಸ್ತವೊಂದು ಚಾಚಿ ಕೊಳ್ಳುತ್ತದೆ!" 'ಕರುಣಾಳು ಬಾ ಬೆಳಕೆ' (Lead Kindly Light) ಎನ್ನುವುದು ನ್ಯೂಮನ್ ಕವಿಯ ಪ್ರಸಿದ್ಧ ಕವನ. ತಾನು ಪ್ರಯಾಣ ಮಾಡುತ್ತಿದ್ದ ಹಡಗು ಅಪಘಾತಕ್ಕೀಡಾಗಿ ಮುಳುಗು ವುದರಲ್ಲಿದ್ದಾಗ, ಅವನು ಅದನ್ನು ರಚಿಸಿದನಂತೆ. ಅವನ ಪ್ರಾರ್ಥನಾಬಲದಿಂದಲೊ ಏನೊ ಹಡಗು ಮುಳುಗಲಿಲ್ಲ. ಎಂತಲೇ ಇದೊಂದು ಮಹತ್ತ್ವದ ಕವನ.

"ಪ್ರಾರ್ಥನೆ ಎಂದರೆ ಭಗವಂತನೊಡನೆ ಸಂವಾದ" ಎಂದು ಯಾರೋ ಹೇಳಿದ್ದಾರೆ. ದಿಟ. ಅದು ವಾದವಾಗ ಬಾರದು, ವಿವಾದವಾಗಬಾರದು; ಸಂವಾದವಾಗಬೇಕು.

### ಶ್ರೀರಾಮಕೃಷ್ಣ ಗುರುವಿಗೆ ನಮೋ, ನಮೋ!

ದಕ್ಷಿಣೇಶ್ವರ ತಟಾಕದಲಿ ಸಿದ್ಧಿಪಡೆದು,  
ಪ್ರಸಿದ್ಧಿಯಾದ ಶ್ರೀರಾಮಕೃಷ್ಣ ನಮೋ, ನಮೋ!

ಭಾರತೀಯರ ಧ್ಯೇಯವ ತಿಳಿಸಿದ  
ಪರಮಗುರು ಶ್ರೀರಾಮಕೃಷ್ಣ ನಮೋ, ನಮೋ!

ಲೋಕವೆಂಬುದು 'ಮಾಯಾ ತಿಮಿರ' ಎಂದರುಹಿದ,  
ಲೋಕಪೂಜಿತ ಶ್ರೀಗುರುದೇವಗೆ ನಮೋ, ನಮೋ!

ಧೀರಶಿಷ್ಯ ವಿವೇಕರ ಪರಿಚಯಿಸಿದ  
ಧೀಮಂತ ಗುರು ಶ್ರೀರಾಮಕೃಷ್ಣ ನಮೋ, ನಮೋ!

ಮತಧರ್ಮ ಭೇದಗಳನಳಿಸಿ ಎಲ್ಲ ಒಂದೇ ಎಂದು,  
ಸಾರಿ ಹೇಳಿದ ಶ್ರೀರಾಮಕೃಷ್ಣ ನಮೋ, ನಮೋ!

ಸರ್ವಮಾರ್ಗಗಳೊಂದೆ ಗುರಿಯ ಸೇರುವ ಮಾರ್ಗ  
ಗಳೆಂದು ತಿಳಿಸಿದ ಶ್ರೀಗುರು ರಾಮಕೃಷ್ಣ ನಮೋ, ನಮೋ!

ಭವಸಮುದ್ರದಲಿ ಮುಳುಗಿ ತಪಿಸುವ ಮಂದಿಗೆ,  
ನಿಜಮಾರ್ಗ ತಿಳಿಸಿದ ಶ್ರೀರಾಮಕೃಷ್ಣ ಪರಮಹಂಸ  
ನಮೋ, ನಮೋ!

ಮಾಯಾಭ್ರಮೆಯನು ಬಿಡಿಸಿ, ಜ್ಞಾನಮಾರ್ಗ ಹಿಡಿಯುವ  
ಸನ್ಮಾರ್ಗ ತೋರಿದ ಧೀರ ಗುರುವಿಗೆ ನಮೋ, ನಮೋ!

ಸರ್ವಮತಗಳ ಸಾರ ಹೀರಿ, ಅದರ ರುಚಿ-  
ಯುಣಿಸಿದ ಶ್ರೀರಾಮಕೃಷ್ಣರಿಗೆ ನಮೋ, ನಮೋ!

ದಕ್ಷಿಣೇಶ್ವರ ದೇವನಿಲಯದ ಪರಮ ಯೋಗೀಂದ್ರನೆನಿಸಿ  
ಲೋಕಪೂಜ್ಯರಾದ ಶ್ರೀಗುರುದೇವಗೆ ನಮೋ, ನಮೋ!

–ಶಂಕರೇಗೌಡ ತುಂಬಕೆರೆ, ಮಂಡ್ಯ